ದಾರಿಯಲ್ಲಿ ಎಮ್ಮೆ ಅಡ್ಡ ಬರಬಹುದಾದ ಪ್ರಸಂಗವೇ ಬರುವುದಿಲ್ಲವೇನೋ ಎಂಬ ಕೊಂಕು ಯೋಚನೆಯೊಂದು ಸುಳಿದುಹೋಯಿತು ಮನಸ್ಸಿನಲ್ಲಿ. '... ನಮ್ಮ ರಮ್ಯ ಬರೀ ಬಿ.ಇ. ಮಾಡಿದ್ರೂ ಅವಳಿಗೆ ಅಲ್ಲೇ ಎಮ್.ಎಸ್. ಓದ್ಸಿದ ನನ್ ಅಳಿಯ. ಇನ್ನೇನು ಕೆಲ್ಸಕ್ಕೂ ಹೋಗ್ಬೇಕೂಂತಿದ್ಲು, ಅಷ್ಟರಲ್ಲೇ ಪ್ರೆಗ್ನೆಂಟ್ ಆಗಿಬಿಟ್ಲು. ಸರಿ, ನಮ್ ರಮೇಶ ಸದ್ಯಕ್ಕೇನೂ ಕೆಲ್ಸ, ಗಿಲ್ಸ ಬೇಡಮ್ಮ, ಹುಶಾರಾಗಿ ಡೆಲಿವರಿ ಒಂದಾಗ್ಲಿ, ಆಮೇಲೆ ಅದನ್ನೆಲ್ಲ ನೋಡ್ಕೊಂಡ್ರಾಯ್ತು ಅಂತಂದ. ನಾವೂ ಹಾಗೇ ಹೇಳೀದ್ವಮ್ಮ. ಈಗ್ ನೋಡು ಬಾಣಂತನ ಮಾಡಿ ಬರ್ತಾ ಇದೀನಿ. ನನ್ ಮಗ ರವೀಗೂ ಏರೋನಾಟಿಕ್ಸ್ ಇಂಜಿನಿಯರಿಂಗ್ ಮುಗ್ಸಿ ಆಗಿತ್ತು. ಅಮೆರಿಕಾದಲ್ಲೇ ಎಮ್.ಎಸ್. ಮಾಡ್ತೀನಿ ಅಂತ ಅವರಪ್ಪನ್ನ ಪೀಡಿಸ್ತಾ ಇದ್ದ. ನೋಡಪ್ಪಾ ನಿನ್ನ ಎಂ.ಎಸ್. ಆಸೆ ಬಿಟ್ಬಿಡು, ಅಷ್ಟೆಲ್ಲಾ ದುಡ್ಡು ನಮ್ಮ ಹತ್ರ ಎಲ್ಲಿದೆ ಅಂತ ಪಾಪ ನಮ್ಮೆಜಮಾನ್ರು ಬೇಜಾರು ಮಾಡಿಕೊಂಡು ಹೇಳಿದ್ರು...'

'ಧಡ್, ಧಡ್... ಧಡ್...' ಇದ್ದಕ್ಕಿದ್ದಂತೆ ಬಸ್ಸಿಳಿದು ಜಟಕಾ ಬಂಡಿ ಹತ್ತಿದೆನೇನೋ ಎಂಬಂತೆ ಕುಲುಕಾಡತೊಡಗಿತ್ತು ಬಸ್ಸು. 'ಓಹೋ, ಘಾಟಿ ಇಳಿಯಲು ಶುರುವಾಗಿರಬೇಕು ಆಂಟಿ, ಇಲ್ಲಿಂದ ಮುಂದೆ ರಸ್ತೆ ಕತೆ ಕೆಟ್ಟೋಗಿದೆ ಅಂತಿದ್ಲು ನನ್ನ ತಂಗಿ'. ಆಂಟಿಯ ಮಾತಿನ ಲಹರಿಯನ್ನು ಮಧ್ಯಕ್ಕೆ ಕತ್ತರಿಸಿ ನನ್ನ ಕಳವಳ ಹೇಳಲೇಬೇಕಾಯಿತು. ಈ ಕೆಟ್ಟುಹೋದ ರಸ್ತೆ, ಹಾಳುಮೂಳು ಯಾವುದೂ ಅವರ ವಾಗ್ಝರಿಗೆ ಅಡ್ಡ ಬರುವ ಲಕ್ಷಣವೇ ಕಾಣಲಿಲ್ಲ. ಒಂದೇ ಸಮನೆ ಅವರ ಕಡೆಗೇ ತಿರುಗಿ ನನ್ನ ಕತ್ತೂ ನೋಯತೊಡಗಿತ್ತು. ಏರಿದ ಬಿಸಿಲಿಂದಾಗಿ ಕಿಟಕಿಯತ್ತ ಮುಖಮಾಡಿ ಕೂರುವಂತೆಯೂ ಇಲ್ಲ. ನಾನು ತಂದಿದ್ದ ನೀರಿನ ಬಾಟಲಿ ಪೂರ್ತಿ ಖಾಲಿಯಾಗಿ ಹೋಗಿತ್ತು. ಆದರೂ ಬಾಯಾರಿಕೆ ತಡೆಯಲಾರದೆ, 'ಆಂಟಿ, ನಿಮ್ಮತ್ರ ನೀರಿದ್ಯಾ' ಅಂತ ಕೇಳಿದೆ. 'ಹೂನಮ್ಮ ತಗೋ, ನೀರು ಕೇಳಿದ್ರೆ ಇಲ್ಲ ಅಂತಾರೇನಮ್ಮ? ಮೈಸೂರಲ್ಲಿ ನಮ್ತಂದೆ ಹೇಳ್ತಿದ್ರು, ಮನೆ ಮುಂದಿರೋ ಬಾವೀಲಿ ಯಾರೇ ಬಂದ್ರು ನೀರಿಲ್ಲ ಅನ್ನದೆ ಕುಡಿದು ಹೋಗಲಿ ಅಂತ್ಲೇ ನಮ್ತಾತ ಆ ಬಾವಿ ತೋಡಿಸಿದ್ದಂತೆ. ಬಲು ಹೆಮ್ಮೆ ಅವರಿಗೆ. ನಮ್ಮ ರವಿಗೆ ಇಂಥಾ ಹಿರಿಯರ ಪುಣ್ಯ ಸಿಗ್ದೆ ಹೋಗುತ್ತಾಮ್ಮಾ? ಅಷ್ಟೊಳ್ಳೆ ಯೂನಿವರ್ಸಿಟಿಯಿಂದ ಸೀಟೂ ಸಿಗ್ತು, ಸ್ಕಾಲರ್ ಶಿಪ್ ಕೂಡಾ ಸಿಗ್ತು. ನನ್ ಮಗಳೂ ಪ್ರೆಗ್ನೆಂಟ್ ತಾನೇ, ತಮ್ಮನೂ ಅವಳ ಜೊತೆ ಯುಎಸ್ ಅಲ್ಲೇ ಇದ್ರೆ ನಮಗೂ ನೆಮ್ಮದಿ ಅಲ್ವೇನಮ್ಮ, ಅದ್ಕೆ ಅವನ್ನೂ ಕಳಿಸಿದ್ವಿ...'

'ಆಂಟಿ, ನಿಮ್ಮ ಹೆಸರೇನು?' ಇದ್ದಕ್ಕಿದ್ದಂತೆ ಕೇಳಿದ್ದೆ ನಾನು.

'ವೈದೇಹಿ ಅಂತ ಕಣಮ್ಮ...'

'ಏನೂ? ವೈದೇಹಿ...? ನೀವು ವೈದೇಹೀನಾ?'

'ಹೂನಮ್ಮ... ಅದೇ ಫೇಮಸ್ ರೈಟರ್ ವೈದೇಹಿ ನಾನೇ ಕಣಮ್ಮಾ...' ಆಂಟಿಯ ಮುಖ ಹೆಮ್ಮೆಯಿಂದ ಉಬ್ಬಿತ್ತು.

'ನೀವು ಕಥೆಗಾರ್ತಿ ವೈದೇಹೀನಾ, ನಿಜವಾಗ್ಲೂ ಅದೇ ವೈದೇಹೀನಾ..?' ನನ್ನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ.

ಚಿಕ್ಕಂದಿನಿಂದಲೂ ನನಗೆ ಓದುವ ಹುಚ್ಚಿತ್ತು. ಊರಲ್ಲೊಂದು ಲೈಬ್ರರಿಯೂ ಇಲ್ಲದ್ದರಿಂದ ಮನೆಗೆ ಬರುತ್ತಿದ್ದ 'ಸುಧಾ', 'ಪ್ರಜಾವಾಣಿ'ಯನ್ನು ಓದುತ್ತಾ ಬೆಳೆದ ನನಗೆ ಕಾರಂತ, ಕುವೆಂಪು, ಭೈರಪ್ಪನವರಂಥ ಖ್ಯಾತನಾಮರ ಹೆಸರು ಪರಿಚಯವಿದ್ದಷ್ಟು ಅವರ ಕೃತಿಗಳನ್ನು ಓದಿ ಗೊತ್ತಿರಲಿಲ್ಲ. ನಮಗೆ ಪಠ್ಯಕ್ಕೆ ಇದ್ದ ಅವರ ಕತೆ, ಕವನಗಳ ಬಗ್ಗೆ ಮಾತ್ರ ಗೊತ್ತಿತ್ತು. ವಾರಪತ್ರಿಕೆಗಳ ಧಾರಾವಾಹಿಗಳನ್ನಷ್ಟೇ ನಾನು ಓದಿದ್ದು. ಆಮೇಲೆ ಕಾಲೇಜಿಗೆ ಹೋದ ಮೇಲೆ ಅಲ್ಪ ಸ್ವಲ್ಪ ಕಾದಂಬರಿಗಳನ್ನು ಓದಿದರೂ ಅದು ಮುಂದುವರೆಯಲಿಲ್ಲ. ನನ್ನ ಇಂಗ್ಲಿಷ್ ಕಲಿಯುವ ಹುಚ್ಚಿನಲ್ಲಿ ಇಂಗ್ಲಿಷ್ ಪುಸ್ತಕ ಓದುವ ಅಭ್ಯಾಸ ಶುರುಮಾಡಿದ್ದೆ. ಅಲ್ಲಿಂದ ಮುಂದೆ ಕನ್ನಡ ಸಾಹಿತ್ಯದ ಕೊಂಡಿಯೇ ಕಳಚಿಹೋಯಿತೇನೋ? ಆದರೂ ವೈದೇಹಿ ಎಂಬ ಹೆಸರು ಕೇಳಿ ನನಗೆ ಗೊತ್ತಿತ್ತು, ಆಕೆಯೊಬ್ಬ ಹೆಸರಾಂತ ಸಾಹಿತಿ ಅಂತ. ಆದರೆ ಅದಕ್ಕಿಂತ ಹೆಚ್ಚು ಅವರ ಬಗ್ಗೆ ನನಗೇನೂ ಗೊತ್ತಿರಲಿಲ್ಲ. ಅವರ ಯಾವ ಕಥೆ, ಕಾದಂಬರಿಯನ್ನೂ ನಾನು ಓದಿರಲಿಲ್ಲ.

ಆದರೂ ಅಂಥಾ ಮಹಾನ್ ಸಾಹಿತಿ ನನ್ನೊಟ್ಟಿಗೆ ಕುಳಿತು ಹೀಗೆ ತಾಸುಗಟ್ಟಲೆ ಹರಟೆ ಹೊಡೆಯುತ್ತಾರೆಂದರೆ ನನಗೆ ನಂಬಲೇ ಆಗಲಿಲ್ಲ.

'ಹೂಂ, ನೀವೂ ಓದ್ತೀರಾಮ್ಮ ನನ್ನ ಬರಹಾನ? ಏನೋ ತೋಚಿದ್ದೆಲ್ಲ ಗೀಚೋ ಹುಚ್ಚು, ಎಲ್ಲ ನಮ್ಮಪ್ಪನ

